417 (38) ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) ಮಾನ್ಯ ಪೌರಾಡಳಿತ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾಲ್ಕಿ ಪಟ್ಟಣಕ್ಕೆ ಎಸ್ ಎಫ್ ಸಿ ಯಿಂದ ಪ್ರಸಕ್ತ ಸಾಲಿಗಾಗಿ ಬಿಡುಗಡೆ ಮಾಡಲಾದ ಹಣವೆಷ್ಟು? ಹಾಗೂ ಆ ಹಣದಲ್ಲಿ ಈ ವರೆಗೆ ಖರ್ಚಾಗಿದೆಷ್ಟು,

ಆ) ಬಾಕಿ ಉಳಿದಿರುವ ಹಣವೆಷ್ಟು?

ಆರ್ ಶ್ರೀನಿವಾಸ್ (ಪೌರಾಡಳಿತ ಸಚಿವರು)

ಅ) 2006–07ನೇ ಸಾಲಿನಲ್ಲಿ ಭಾಲ್ಕಿ ಪುರಸಭೆಗೆ ಎಸ್ ಎಫ್ ಸಿ ಅಡಿಯಲ್ಲಿ ಬಿಡುಗಡೆ ಮಾಡಲಾದ ಅನುದಾನದ ವಿವರ

(ರೂ ಲಕ್ಷಗಳಲ್ಲಿ)

1	ಮುಕ್ಕ ನಿಧಿ	61 26
2	ವಿಶೇಷ ಅನುದಾನ	25 00
3	ವೇತನದ ಅನುದಾನ	82 44
	ಒಟ್ಟು	168 70
4	ಈವರೆಗೆ ಖರ್ಚಾಗಿರುವ ಹಣ (ವೇತನಕ್ಕಾಗಿ)	45 58

ಆ) ರೂ 123 12 ಲಕ್ಷ

418 (141) ಶ್ರೀ ರಘುಪತಿ ಭಟ್ ಕೆ (ಉಡುಪಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಣಿಪಾಲ ಪ್ರಧಾನ ಅಂಚೆ ಕಛೇರಿಯಿಂದ ಕೈಗಾರಿಕಾ ಪ್ರದೇಶದವರೆಗಿನ 1 ಕಿ ಮೀ ರಸ್ತೆಯನ್ನು ಲೋಕೋಪಯೋಗಿ ಇಲಾಖೆಯಿಂದ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೆ ಹಸ್ತಾಂತರ ಮಾಡಲಾಗಿದೆಯೇ,

ಆ) ಸದರಿ ರಸ್ತೆ ಅಭಿವೃದ್ಧಿಗೆ ಲೋಕೋಪಯೋಗಿ ಇಲಾಖೆಯಿಂದ ಒಂದು ಕೋಟಿ ರೂಪಾಯಿಗಳ ಅನುದಾನ ಮಂಜೂರಾಗಿರುವುದು ನಿಜವೇ,

ಇ) ಹೌದಾಗಿದ್ದಲ್ಲಿ, ಈ ರಸೆಯ ಅಭಿವೃದ್ಧಿ ಕಾಮಗಾರಿಗಳು ಈಗ ಯಾವ ಹಂತದಲ್ಲಿದೆ,

ಈ) ಈ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು?